ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವೇತ ಕೊಟ್ಟಿದ್ದೇವೆಂದು ಹೇಳಲಿಲ್ಲ. ೨೪ ಹಳ್ಳಿಗಳಿಗೆ ಲಿಫ್ಟ್ ಇರಿಗೇಷನ್ ಮುಖಾಂತರ ನೀರು ಕೊಡಬೇಕು ಎಂದು ಸರ್ಕಾರ ಪರಿಶೀಲನೆ ಮಾಡಿದೆ. ಎಕನಾಮಿಕಲಿ ಫೀಸಿಬಲ್ ಇಲ್ಲ ಎಂದು ತಿಳಿದು ಬಂದಿದ್ದರಿಂದ ಅಲ್ಲಿ ಡ್ರಾಪ್ ಮಾಡಿದೆ

ಶ್ರೀ ಆರ್. ಎಸ್. ನಡೋಣಿ.—ಅಲ್ಲಿ ಹಳ್ಳ ಕೆರೆ ಇವೆ. ಆ ಕೆರೆಯಿಂದ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸರ್ಕಾರದಿಂದ ಸಹಾಯ ಮಾಡಿದರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ತಾವೇನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ಕೆರೆಯಲ್ಲಿ ಸಫಿಷಿಯೆಂಟ್ ನೀರಿಲ್ಲ, ಆದರಿಂದ ಇಷ್ಟೆಲ್ಲಾ ಹಳ್ಳಿಗಳಿಗೆ ನೀರು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಮುಂದೆ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸರ್ವೆ ಮಾಡಿಸುತ್ತಾ ಇದ್ದೇವೆ, ಸರ್ವೆ ರಿಪೋರ್ಟ್ ಬಂದ ಮೇಲೆ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎಸ್. ನಡೋಣಿ.—೧೫ ವರ್ಷಗಳಿಂದ ಸರ್ವೆ ಮಾಡುತ್ತಾ ಇದ್ದಾರೆ. ಇಲ್ಲಿಯವರೆಗೆ ಪರಿಹಾರ ಕಂಡು ಬಂದಿಲ್ಲ. ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಹೆಚ್ಚುವರಿ ಭೂಮಿಗೆ ನೀರಾವರಿ ಸೌಲಭ್ಯ ಕೊಡಬೇಕು ಎಂದು ಇದೆ. ಈ ಪ್ರಕಾರ ಅಲ್ಲಿ ೧೫ ವರ್ಷಗಳಿಂದ ನೀರಾವರಿ ಸೌಲಭ್ಯ ಇಲ್ಲ. ರಾಯಭಾಗ್ ತಾಲ್ಲೂಕಿನಲ್ಲಿ ಯಾವ ಪ್ರಯೋಜನವಿಲ್ಲ. ಆದ್ದರಿಂದ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ೨೪ ಹಳ್ಳಿಗಳು ನೀರಿನ ತೊಂಡರೆಯಲ್ಲಿವೆ. ಅವರು ಮಾನ್ಯ ಮುಖ್ಯ ಮಂತ್ರಿಗಳಿಗೂ ಕೂಡ ಮನವಿ ಪತ್ರ ಕೊಟ್ಟಿದ್ದಾರೆ. ದುರ್ದೈವ, ಅಲ್ಲಿ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಳ್ಳಬೇಕು ಎಂದು ಸರ್ಕಾರದವರು ಪರಿಶೀಲನೆ ಮಾಡಿದರೂ ಅದು ಸಾಧ್ಯವಿಲ್ಲ. ಎಕನಾಮಿಕಲೀ ಫೀಸಿಬಲ್ ಇಲ್ಲ ಎಂದು ಕೈಬಿಟ್ಟಿದ್ದೇವೆ. ಆದಕ್ಕೆ ಆಲ್ಟರ್ನೇಟೀವ್ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತಾ ಇದ್ದಾರೆ.

ಶ್ರೀ ಆರ್. ಎಸ್. ನಡೋಣಿ.—ಅಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಅಂದರೆ ಜನ ವಲಸೆ ಹೋಗುವ ಪ್ರಸಂಗ ಬರುತ್ತದೆ. ಆದ್ದರಿಂದ ನಿರ್ದಿಷ್ಟವಾಗಿ ಸೂಕ್ತವಾದ ಭರವಸೆ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆಂಧ್ರಾ ಕಡೆ ಒಪನ್ ವೆಲ್ ಅಥವಾ ಬೋರ್‌ವೆಲ್ ಮುಖಾಂತರ ಇರಿಗೇಷನ್ ಮಾಡಬೇಕೇ ಹೊರತು ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಎಕನಾಮಿಕಲಿ ಆಗುವುದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ.

Sanction of old age Pensions in the State

931 SRI C. APPAJI (Kanakapura) Will the Minister for Finance and Tourisum be pleased to State.—

(a) Total number of Old Age Pensions sanctioned during 1980–81:

(b) the expenditure incurred on this during the same year ;

(c) number of persons who are in receipt of old age pensions till now ;

(d) number of peisons in Kanakapura taluk who were given this pension ?

SRI M. VEERAPPA MOILY (Minister for Finance and Tourism). —

(a) 77,086-

(b) Rs. 1,461.00 lakhs.

(c) 3.47,289 (till 28-2-1982)

(d) During 1980-81 : 1073.
During 1981-82
(upto 28-2-1982): 1080.

ಶ್ರೀ ಸಿ. ಅಪ್ಪಾಜಿ.—ನನ್ನ 'ಅ' ಮತ್ತು 'ಆ' ಪ್ರಶ್ನೆಗೆ ಜಿಲ್ಲಾವಾರು ವಿವರಣೆ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—೧೯೮೦-೮೧ರ ಲೆಕ್ಕ ಈ ರೀತಿ ಇದೆ. ಬೆಂಗಳೂರು ೧೧,೩೨೬, ಕೋಲಾರ ೩,೧೯೮, ತುಮಕೂರು ೩,೩೭೫, ಶಿವಮೊಗ್ಗ ೩,೪೨೪, ಚಿತ್ರದುರ್ಗ ೩,೦೦೯, ಮೈಸೂರು ೫,೪೨೬, ಮಂಡ್ಯ ೪,೭೬೫, ಹಾಸನ ೨,೦೪೮, ಚಿಕ್ಕಮಗಳೂರು ೧,೯೭೬, ದಕ್ಷಿಣ ಕನ್ನಡ ೨,೪೯೨, ಕೊಡಗು ೧,೩೧೯, ಬೆಳಗಾಂ ೩,೧೩೮, ಬಿಜಾಪುರ ೪,೨೦೪, ಧಾರವಾಡ ೩,೪೩೫, ಉತ್ತರ ಕನ್ನಡ ೧,೦೪೪, ಗುಲ್ಬರ್ಗ ೨,೭೮೪, ಬೀದರ್ ೧,೪೨೫, ರಾಯಚೂರು ೮,೫೭೧, ಬಳ್ಳಾರಿ ೧೦,೫೭೭. ಬೆಂಗಳೂರಿನದು ಸಬರೇಟ್ ಫಿಗರ್ ೧೧,೩೨೬. ಇದು ರಾಜ್ಯದಲ್ಲಿ ಅತ್ಯಂತ ಹೆಚ್ಚಿನದು. ಮತ್ತು ಇದು ಅಂಕೆ ಸಂಖ್ಯೆಗಳು ಬರೀ ೧೯೮೦-೮೧ನೇ ಸಾಲಿನದು ಮಾತ್ರ.

ಶ್ರೀ ಎ. ಲಕ್ಷ್ಮೀಸಾಗರ್.—ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಒಂದೊಂದು ಸಲ ೩ ತಿಂಗಳು, ೪ ತಿಂಗಳ ವೃದ್ಧಾಪ್ಯ ವೇತನ ಅವರಿಗೆ ಸಿಗುತ್ತಾ ಇಲ್ಲ ಎಂದು ಜನ ನನ್ನ ಹತ್ತಿರ ಬಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಪರಿಶೀಲನೆಮಾಡಿ, ಮುಂದೆ ಈ ರೀತಿ ಆಗದ ರೀತಿ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗಾಗಲೇ ಸರ್ಕಾರದ ಆದೇಶ ಕೊಟ್ಟಿದೆ, ಯಾವುದೇ ಅರ್ಜಿ ಬರಲಿ, ೩ ತಿಂಗಳೊಳಗಾಗಿ ವಿಲೇವಾರಿ ಮಾಡಬೇಕು ಎಂದು ಹೇಳಿದ್ದೇವೆ. ಎಲ್ಲಾದರೂ ೩ ತಿಂಗಳೊಳಗಾಗಿ ರಿಜೆಕ್ಷನ್ ಆಥವಾ ಆಪ್ರೂವಲ್ ಆಗದೇ ಇದ್ದ ಪಕ್ಷದಲ್ಲಿ ನಾವು ಅದನ್ನು ಪುನಃ ವಿಮರ್ಶೆಮಾಡಿಕೊಂಡು ಎಲ್ಲೆಲ್ಲಿ ಮಾಡಿಲ್ಲ, ಅಂಥಾ ಕಡೆ ಸಂಬಂಧಪಟ್ಟ ಅಧಿಕಾರಿಗಳನ್ನು ಏಕೆ ಮಾಡಿಲ್ಲ ಎಂದು ವಿಚಾರಣೆ ಮಾಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೊಟ್ಟಿರುವವರಿಗೆ ಐದಾರು ತಿಂಗಳಿಂದ ಸರಿಯಾಗಿ ವಿತರಣೆಯಾಗುತಾ ಇಲ್ಲ.

SRI M. VEERAPPA MOILY.—Of course it did happen in Bangalore. ಕಂಪ್ಯೂಟರ್‌ಗೆ ಹಾಕಿದ್ದೇವೆ. There was some new system which we have evolved because some bogus claims came. Some times it reached wrong people. So we have re-structured the whole system. ಬೆಂಗಳೂರಿನದು, ಎರಡು ಮೂರು ತಿಂಗಳು ತಡ ಆಗಿತ್ತು. It has come to my notice. ಅದು ಸರಿಯಾಗಿದೆ. ಯಾವ ರೀತಿಯಾದಂಥ ಆಡೆತಡೆ ಪೇಮೆಂಟ್‌ನಲ್ಲಿ ಆಗಿಲ್ಲ. ಅಂಥಾದ್ದು ಏನಾದರೂ ಇದ್ದರೆ ಪುನಃ ವಿಚಾರ ಮಾಡುತ್ತೇನೆ. Iam told that problem has been solved now.

ST. JOHN SINCLAIR MARLEY.—Mr. Speaker Sir, through you I would kindly request the hon.Minister to look into the question of those people whose pensions have been stopped. There have been complaints from members of my community that they have stopped pensions. In one case it was stopped in September last year. In

some other cases it was stopped even earlier. And no answers have been given as to the reasons, as to why the pensiods have been stopped. I have taken up the matter of one case with the hon. Minister who said that he would look into it. Therefore, I would be grateful if the Government would look into this matter and try to pay them as soon as possible. Thank you.

SRI M. VEERAPPA MOILY.—It is quite true that for some time it was stopped. That was in the interest of the pensioners. Sometimes it reached the wrong people, I have already answered this. We have evolved a new system by which the payments are not made to the wrong people and the bogus claimants will not avail this facility. That is why for a period of four to five months it was stopped. All these problems have been resolved and there is no stoppage of any payment and the payments have been more smooth. Still I will look into the matter. I am speaking after collecting the latest information. If there are any more complaints, I will difinitely see that these are not repeated and payments are promptly made.

ಶ್ರೀ ಸಿ. ಆಪ್ಪಾಜಿ.—ಗ್ರಾಮಾಂತರ ಪ್ರದೇಶಗಳಲ್ಲಿ ಮಂಜೂರಾದರೂ ೬ ತಿಂಗಳು, ೮ ತಿಂಗಳಾದರೂ ಪೆನ್‌ಷನರ್‌ಗಳಿಗೆ ಹಣ ತಲುಪುತ್ತಾ ಇಲ್ಲ. ಈಗ ಮಾನ್ಯ ಮಿತ್ರರು ಏನು ಹೇಳಿದ್ದಾರೋ ಅದೇ ಕಂಪ್ಲೈಟ್ಸ್ ಗ್ರಾಮಾಂತರ ಪ್ರದೇಶಗಳಲ್ಲೂ ಬರುತ್ತಾ ಇದೆ. ಅದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಉತ್ತರ ಹೇಳಿದರಲ್ಲ!

ಶ್ರೀ ಸಿ. ಆಪ್ಪಾಜಿ.—ಗ್ರಾಮಾಂತರ ಪ್ರದೇಶಗಳಲ್ಲಿ ಇದೇ ತರಹ ದೂರು ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಸರ್ಕಾರದವರು ಇದರ ಬಗ್ಗೆ ಏನು ಯೋಚನೆ ಮಾಡುತ್ತಾ ಇದ್ದಾರೆ.

SRI A. LAKSHMISAGAR.—Sir, the position is very critical in some cases. There are sons, daughters and other earning members. But unfortunately, the old people are not cared for. They are almost on the streets literally. Therefore, the Government must issue proper circulars to those offieers who make enquiries in these particular cases of disbandment of old persons and see that old age pension facilities are also extended to them. Legally speaking, the mother or father whoever it is, can make a claim against the earning sons. But who is going to take this matter before the court of law? Actually it is not possible for them to do so. Therefore, such circulars and clarifications are very necessary. Sooner they are done, better it would be in the interest of pensioners.

SRI M. VEERAPPA MOILY.—This is one of the components of the circular which we have issued. In the circular we have stated,

> "Normally, person having a spouse or a son or a son's son who is not less than 20 years old is not eligible for this pension. However, if such a relative though alive, is so poor

as not to be in a position to support the applicant or if the applicant is not being maintained by such a relative, old age pension is admissible."

This has been mentioned in the circular. If there is anything wrong, we will send clarification. ಬೆಂಗಳೂರು ಜಿಲ್ಲೆಯ ಮಟ್ಟಿಗೆ ಒಂದು ಹೊಸ ಕಾರ್ಯಕ್ರಮವನ್ನು ನಾವು ಅನುಸರಿಸುತ್ತಿದ್ದೇವೆ. ಅದು ಕನಕಪುರಕ್ಕೂ ಹೊಂದಿಕೊಳ್ಳುತ್ತದೆ. ೨-೩ ತಿಂಗಳ ಹಿಂದೆ ಸ್ವಲ್ಪ ಗೊಂದಲ ಇತ್ತು, ಈಗ ಪರಿಸ್ಥಿತಿ ಸುಧಾರಿಸಿದೆ.

ಶ್ರೀ ಜಿ. ರಾಮೇಗೌಡ.—ತಾವು ಮಾಡಿರತಕ್ಕ ಕಾನೂನಿನಲ್ಲಿ ಮಕ್ಕಳು ಇದ್ದರೆ ; ಕೊಡಬಾರದೆಂದು ಇದೆಯಂತೆ. ಬಹುತೇಕ ಹರಿಜನರು ಮುದುಮೆಯಾದ ಮೇಲೆ ತಾಯಿ ಬಿಟ್ಟು ಬೇರೆ ಸಂಸಾರ ಹೂಡುತ್ತಾರೆ ; ತಾಯಿಯನ್ನು ಜೊತೆಯಲ್ಲಿಟ್ಟುಕೊಂಡು ಕಾಪಾಡುವಂತಹ ಶ್ರದ್ಧೆ ಅವರಿಗಿಲ್ಲ ; ಇದಕ್ಕೆ ಕಾರಣ ಕೂಡ ತಿಳಿದಿಲ್ಲ. ಇಂಥವರಿಗೆ ವಿಶೇಷವಾಗಿ ವಿಶ್ರಾಂತಿ ವೇತನ ಕೊಡುವಂತಹ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ವಿಚಾರದಲ್ಲಿ ಕಟ್ಟುನಿಟ್ಟಾದ ಪದ್ಧತಿ ಏನೂ ಇಲ್ಲ. ಕೆಲವೊಂದು ಸಂದರ್ಭದಲ್ಲಿ ರೆವಿನ್ಯೂ ಅಧಿಕಾರಿಗಳು ತಪ್ಪು ವರದಿಗಳ ಆಧಾರದ ಮೇಲೆ ಇಂಥ ಪ್ರಕರಣಗಳಲ್ಲಿ ಅರ್ಜಿಗಳನ್ನು ವಜಾ ಮಾಡಿದ್ದು ; ಮತ್ತೆ ಅದರ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಸುತ್ತೋಲೆಯನ್ನು ಕಳುಹಿಸಿ ಮಕ್ಕಳಿದ್ದು, ಹೆತ್ತವರನ್ನು ಅನಾಥರನ್ನಾಗಿ ಮಾಡಿರುವುದರ ಬಗ್ಗೆಯೂ ಕೂಡ ವಿಚಾರಣೆ ಮಾಡಬೇಕೆಂದು ತಿಳಿಸಲಾಗಿದೆ.

ಶ್ರೀ ಪಿ. ರಾಮುದೇವ್.—ಸ್ವಾಮಿ, ವೃದ್ಧಾಪ್ಯ ವೇತನವನ್ನು ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಕೊಡುವಂತಹ ಒಂದು ಪದ್ಧತಿ ಇದೆ. ನಮ್ಮ ರಾಜ್ಯದಲ್ಲಿಯೂ ಅಂಥ ಒಂದು ವ್ಯವಸ್ಥೆ ಇರುವುದು ಬಹಳ ಸಂತೋಷ ಪಡಬೇಕಾದ ವಿಷಯ ಆದರೆ, ಕಳೆದ ಹತ್ತಾರು ವರ್ಷಗಳಿಂದ ೪೦ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದೀರಿ, ಇದನ್ನು ೬೦ ರೂಪಾಯಿಗಳಿಗೆ ಏರಿಸುವ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಂತ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

SRI A. LAKSHMISAGAR.—Sir, it is true that this amount of Rs. 40 payable as old age pension was fixed some years ago. In view of rising prices and the value of money being reduced, there is a strong case for upward revision of this old age pension. Otherwise payment of old-age pension does not give them any benefit. It does not fetch them even a cup of coffee per day. Today, a cup of coffee costs not less than fifty paise. I would very much urge upon the Government to think over very seriously and see that the old age pensions are given an upward revision as early as possible. Otherwise, it does not serve the purpose for whech the pension scheme is enunciated by the Government.

SRI M. VEERAPPA MOILY.—Such a proposal is not before the Government for consideration at present. Anyway, we have noted your suggestion and we will see what best could be done.

MR. SPEAKER.—The question hour is over.